ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ ಅಭಿವೃದ್ಧಿ ನಿಗಮಗಳಿಂದ ಸಾಲ ಮತ್ತು ಸಹಾಯಧನ ಮಂಜೂರಾತಿಯಲ್ಲಿ ವಿಳಂಬ

1620 (2229) : ಶ್ರೀ ಹೆಚ್. ಗೋಪಾಲ್ ಭಂಡಾರಿ (ಕಾರ್ಕಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮ ಮತ್ತು ಪರಿಶಿಷ್ಟ ಜಾತಿ ಪಂಗಡದ ಅಭಿವೃದ್ಧಿ ನಿಗಮಗಳಿಂದ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ಮಂಜೂರಾಗಲು ವಿಳಂಬವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

(ಆ) ಸಹಾಯಧನ ಬಿಡುಗಡೆಯಾದ ಬ್ಯಾಂಕಿನವರು ಫಲಾನುಭವಿಗೆ ಸಾಲ ಮಂಜೂರು ಮಾಡುತ್ತಿಲ್ಲ; ಇದಕ್ಕೆ ಸರಕಾರವು ಏನು ಕ್ರಮ ತೆಗೆದುಕೊಂಡಿದೆ;

(ಇ) ಸಾಲ ಮತ್ತು ಸಹಾಯಧನ ಕೋರಿ ಅರ್ಜಿ ಸಲ್ಲಿಸಿರುವುದಕ್ಕೆ ಮಂಜೂರಾಗಲು ಬಾಕಿ ಇರುವ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಸಾಲ ಮತ್ತು ಸಹಾಯಧನ ಕೋರಿ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಬಂದ ಅರ್ಜಿಗಳ ಪೈಕಿ 3409 ಅರ್ಜಿಗಳು ಬಾಕಿ ಇವೆ. ಅದೇ ರೀತಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಬಂದ ಅರ್ಜಿಗಳ ಪೈಕಿ 2819 ಅರ್ಜಿಗಳು ಬಾಕಿ ಇವೆ. ಬಾಕಿ ಇರುವ ಅರ್ಜಿಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಪ್ರತಿ ವರ್ಷವೂ ಈ ಮೇಲಿನ ನಿಗಮಗಳಿಗೆ ಸರ್ಕಾರದಿಂದ ಸ್ವಯಂ ಉದ್ಯೋಗ ಯೋಜನೆಗೆ ಸಂಬಂಧಿಸಿದಂತೆ ಬಿಡುಗಡೆ ಮಾಡುವ ಮೊತ್ತದಿಂದ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. 1999-2000 ರಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 15259 ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನವನ್ನು ನೀಡಿರುತ್ತದೆ. ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಫೆಬ್ರವರಿ ಅಂತ್ಯದವರೆಗೆ 9705 ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಿರುತ್ತದೆ. ಬಾಕಿ ಉಳಿದಿರುವ ಅರ್ಜಿಗಳನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲಾಗುವುದು.

ಅನುಬಂಧ

ಸಾಲ ಮತ್ತು ಸಹಾಯಧನ ಕೋರಿ ಅರ್ಜಿ ಸಲ್ಲಿಸಿರುವುದಕ್ಕೆ ಮಂಜೂರಾಗಲು ಬಾಕಿ ಇರುವ ಸಂಖ್ಯೆ

ಕ್ರ. ಸ.	ಜಿಲ್ಲೆಯ ಹೆಸರು	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ	ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ
1.	ಬೆಂಗಳೂರು ನಗರ ಜಿಲ್ಲೆ	35	53
2.	ಬೆಂಗಳೂರು ಗ್ರಾಮಾಂತರ	ಇಲ್ಲ	565
3.	ಬಳ್ಳಾರಿ	282	214
4.	ಬಿಜಾಪುರ	ಇಲ್ಲ	98
5.	ಬೀದರ್	50	48
6.	ಕೊಡಗು	ಇಲ್ಲ	184
7.	ಧಾರವಾಡ	85	209
8.	ಗುಲ್ಬರ್ಗ	849	58
9.	ಮಂಡ್ಯ	125	94
10.	ಮೈಸೂರು	ಇಲ್ಲ	40
11.	ಉತ್ತರ ಕನ್ನಡ	85	156
12.	ದಕ್ಷಿಣ ಕನ್ನಡ	57	55
13.	ಶಿವಮೊಗ್ಗ	40	57
14.	ತುಮಕೂರು	243	ಇಲ್ಲ
15.	ಬೆಳಗಾವಿ	66	540
16.	ಚಿತ್ರದುರ್ಗ	66	189
17.	ಚಿಕ್ಕಮಗಳೂರು	50	109
18.	ಹಾಸನ	ಇಲ್ಲ	79
19.	ರಾಯಚೂರು	28	22

20.	ಕೋಲಾರ	ಇಲ್ಲ	ಇಲ್ಲ
21.	ಚಾಮರಾಜನಗರ	ಇಲ್ಲ	205
22.	ಉಡುಪಿ	45	ಇಲ್ಲ
23.	ದಾವಣಗೆರೆ	150	71
24.	ಬಾಗಲಕೋಟೆ	120	36
25.	ಹಾವೇರಿ	25	72
26.	ಗದಗ	350	192
27.	ಕೊಪ್ಪಳ	108	63
	ಒಟ್ಟು	2819	3409

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯಲ್ಲಿ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರ ವಹಿಸಿಕೊಳ್ಳಲು ಕೆ. ಎ. ಎಸ್. ಅಧಿಕಾರಿಗಳ ನೇಮಕ

1621 (1917) : ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಧಿಕಾರಿಯಂತಹ ಮಹತ್ವದ ಹುದ್ದೆಯಲ್ಲಿ ಕಾಲೇಜು ಶಿಕ್ಷಕರನ್ನು ನೇಮಿಸುವುದರಿಂದಾಗಿ ಆಡಳಿತ ಕುಸಿದು ಆ ವರ್ಗಗಳ ಜನರಿಗೆ ಅಪಾರ ಅನ್ಯಾಯವಾಗಿರುವ ವಿಚಾರ ಸರ್ಕಾರಕ್ಕೆ ಗೊತ್ತಿದೆಯೇ;

(ಆ) ಹಾಗಿದ್ದಲ್ಲಿ, ಇದಕ್ಕೆ ಪರ್ಯಾಯವಾಗಿ ಕೆ. ಎ. ಎಸ್. ಅಧಿಕಾರಿಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಧಿಕಾರಿಗಳನ್ನಾಗಿ ಯಾವಾಗ ನೇಮಕ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಇಲ್ಲ

(ಆ) ಉದ್ಭವಿಸುವುದಿಲ್ಲ.